

ದೆವ್ವ ಭೂತ ಇದೆ ಎಂಬ ವದಂತಿ. ಆ ವದಂತಿಯನ್ನು ಎಬ್ಬಿಸಿದವರು ಬೇರೆ ಯಾರೂ ಅಲ್ಲ ಈ ಗುಂಪಿನವರೆ. ಕುರಿ ಮೇಕೆ ಮೇಯಿಸುವವರಿಂದ ಇವರಿಗೆ ಏನೂಸಮಸ್ಯೆಯಾಗುತ್ತಿರಲಿಲ್ಲ, ಕಾರಣ ಇವರು ಬೆಂಗಳೂರಿನಿಂದ ಬರುವಷ್ಟರಲ್ಲಿ ಅವರು ಜಾನುವಾರುಗಳೊಂದಿಗೆ ಮನೆ ಸೇರುತ್ತಿದ್ದರು.

ಬೆಂಗಳೂರಿಂದ ಹೈದರಾಬಾದ್‌ಗೆ ಹೋಗುವ ಹೆದ್ದಾರಿಯಲ್ಲಿ ಪೆರೇಸಂದ್ರ ದಾಟಿ ಸಾದಲಿ ಕ್ರಾಸ್‌ನ ಬಳಿ ಬಲಕ್ಕೆ ಐದಾರು ಕಿ.ಮೀ. ದೂರ ಹೋದರೆ ಹಳ್ಳಿಗಳು ಪ್ರಾರಂಭವಾಗುತ್ತವೆ. ಮುಖ್ಯ ರಸ್ತೆಯಿಂದ ದಾರಿ ನಾಲ್ಕು ಭಾಗಗಳು, ಬಲಕ್ಕೆ ಹೋದರೆ ವಿಶ್ವ, ತೇಜ ಅವರ ಊರು, ಮುಂದಕ್ಕೆ ಹೋದರೆ ರಾಜೇಶ್, ಸೂರಿ, ಹರಿ ಅವರ ಊರುಗಳು, ಎಡಕ್ಕೆ ಸುಮಾರು ಐದಾರು ಕಿ.ಮೀ. ದೂರ ಹೋದರೆ ತೋಪು ಪ್ರಾರಂಭವಾಗುತ್ತಿತ್ತು. ಅಲ್ಲಿಂದ ಸ್ವಲ್ಪ ದೂರ ಕಾಲುದಾರಿಯಲ್ಲಿ ಹೋದರೆ ಇವರ ಎಣ್ಣೆ ಮರ ಸಿಗುತ್ತಿತ್ತು. ಕಾಲುದಾರಿಯಾದರು ದಾರಿ ದ್ವಿಚಕ್ರ ವಾಹನ ಹೋಗಬಹುದಾದ ಮಟ್ಟಕ್ಕಿತ್ತು.

ಎಂದಿನಂತೆ ಬೆಂಗಳೂರಿನಿಂದ ಸೀದಾ ಎಣ್ಣೆ ಮರದ ಬಳಿ ಮೊದಲು ವಿಶ್ವ ಬಂದು ತನ್ನ ಗಾಡಿಯನ್ನು ನಿಲ್ಲಿಸಿ ಕೆಳಗಿಳಿಯದೆ, ಸುತ್ತಲೂ ನೋಡುತ್ತಾನೆ. ಯಾಕೊ ಅವನಿಗೆ ಇಂದು ಮಾತ್ರ ವಾತಾವರಣ ತುಂಬಾ ತಂಪಾಗಿ ಅನಿಸುತ್ತಿತ್ತು. ಸೂರ್ಯ ಆಗತಾನೆ ಮುಳುಗಿ ಚಂದ್ರ ಆಗಮಿಸುತ್ತಿರುತ್ತಾನೆ, ಹಕ್ಕಿಗಳು ಗೂಡನ್ನು ಸೇರಲು ಹಾತೊರೆದು ಹಾರುತ್ತಿರುತ್ತವೆ. ವಿಶ್ವ ಗಾಡಿಯಿಂದ ಕೆಳಗಿಳಿದು ಬಂದು ಎಣ್ಣೆ ಮರದ ಕೆಳಗೆ ಒಂದು ಬಂಡೆಯ ಮೇಲೆ ಬಿದ್ದಿದ್ದ ಕಸವನ್ನು ತನ್ನ ಬೂಟಿನ ಕಾಲಿನಲ್ಲೆ ತಳ್ಳಿ ಕೂರುತ್ತಾನೆ. ಹವಾ ತಂಪಾಗಿದ್ದರೂ, ಸುತ್ತಲೂ ಪ್ರಕೃತಿಯಿದ್ದರೂ ಸವಿಯಲು ಮನಸಿಲ್ಲದ ವಿಶ್ವ ಕೂತು ಕೂತು ಸಾಕಾಗಿ ರಮೇಶನಿಗೆ ಕರೆ ಮಾಡುತ್ತಾನೆ, 'ನೀವು ಕರೆ ಮಾಡುತ್ತಿರುವ ಚಂದಾದಾರರು ಉತ್ತರಿಸುತ್ತಿಲ್ಲ' ಎನ್ನುತ್ತಿರುವಾಗಲೇ, ಯಾವುದೋ ವಾಹನಗಳು ಬರುವ ಸದ್ದಾಗುತ್ತದೆ. ಶಬ್ಧವನ್ನು ಆಲಿಸಿದ ವಿಶ್ವ ಫೋನ್ ಕಟ್ ಮಾಡಿ ದಾರಿಯ ಕಡೆ ನೋಡುತ್ತಾನೆ, ಎರಡು ದ್ವಿಚಕ್ರ ವಾಹನಗಳು ವಿಶ್ವನ ಗಾಡಿಯ ಪಕ್ಕ ಬಂದು ನಿಲ್ಲುತ್ತವೆ. ತೇಜ, ಸೂರಿ ಇಬ್ಬರು ಒಂದು ಗಾಡಿಯಲ್ಲಿ, ಹರಿ, ರಾಜೇಶ್ ಇಬ್ಬರು ಒಂದು ಗಾಡಿಯಲ್ಲಿ ಬಂದು ಕೆಳಗಿಳಿಯುತ್ತಾರೆ.

ಎಲ್ಲರೂ ಹೋಗಿ ಎಣ್ಣೆ ಮರದ ಕೆಳಗೆ ಕುಳಿತು ಹರಟುತ್ತಾ ತಾವು ತಂದ ತಿಂಡಿತಿನಿಸು ಊಟಗಳ ಪೊಟ್ಟಣಗಳನ್ನು ಬಿಚ್ಚಿ ತಿನ್ನುತ್ತಾ ಕುಡಿಯುತ್ತಾ ಸಿಗರೇಟು ಸೇದುತ್ತಾ ಎಂದಿನಂತೆ ಅಲ್ಲೇ ಮಲಗಿಬಿಡುತ್ತಾರೆ. ಮಾರನೆ ದಿನ ಬೆಳಿಗ್ಗೆ ಸುಮಾರು ಎಂಟು ಗಂಟೆ, ವಿಶ್ವ ಎಚ್ಚರವಿಲ್ಲದೆ ಮಲಗಿರುತ್ತಾನೆ. ಆಲದ ಮರದ ಕೊಂಬೆಗಳ ಸೊಂದಿಗಳಿಂದ ಎಳೆ ಬಿಸಿಲು ಬಂದು ಅವನ ಮುಖದ ಮೇಲೆ ಬಿದ್ದು ಅವನನ್ನು ಎಚ್ಚರಗೊಳಿಸುತ್ತದೆ. ವಿಶ್ವ ಕಣ್ಣು ತೆಗೆದು "ಥೂತ್ ಎಲ್ಬಂದ್ರೂ ನೆಮ್ದಿ ಇಲ್ಲ" ಎಂದು ಬಿಸಿಲನ್ನು ಮನಸಲ್ಲೆ ಶಪಿಸುತ್ತ ಮತ್ತೆ ಮಲಗಲು ಮುಖ ಇನ್ನೊಂದು ಕಡೆ ತಿರುಗಿಸುವಾಗ ಅರೆ ಕಣ್ಣುಗಳಲ್ಲಿ ನೋಡುತ್ತಾನೆ, ಅವನೊಟ್ಟಿಗೆ ಬಂದ ಯಾರೊಬ್ಬರೂ ಇರುವಂತೆ ಕಾಣಲಿಲ್ಲ. ಮಲಗಿಕೊಂಡೆ ಅವನು ಕತ್ತು ಸುತ್ತಲೂ ತಿರುಗಿಸಿ ನೋಡುತ್ತಾನೆ ಯಾರು ಇರುವುದಿಲ್ಲ. ಸರಿ ಎಂದು ಬಾರ್ಲು ಮಲಗಿದ್ದಾತ ಬಲದಿಂದ ಎಡಕ್ಕೆ ತಿರುಗಿ ಬಲ ಮಗ್ಗಲಲ್ಲಿ ಎದ್ದು ಕೂತು ಇನ್ನೊಂದು ಬಾರಿ ಸುತ್ತಲೂ ನೋಡುತ್ತಾನೆ ಒಂದು ನರಪಿಳ್ಳೆಯೂ ಕಾಣುವುದಿಲ್ಲ. ವಿಶ್ವ ತಾವು ಗಾಡಿ ನಿಲ್ಲಿಸಿದ ಸ್ಥಳಕ್ಕೆ ಬಂದು ನೋಡುತ್ತಾನೆ ಅವನದೊಂದೇ ಗಾಡಿ ಇದೆ. ಮತ್ತೆ ಆಲದ ಮರದ ಕೆಳಗೆ ಬಂದವನೆ ಮನಸಲ್ಲೇ 'ಎಲ್ಲೋದ್ರು ಈ ಮುಂಡೇ ಮಕ್ಳು' ಎಂದು 'ಲೇ ರಮೇಶ, ತೇಜ, ಹರಿ' ಎಂದು ಎಲ್ಲರ ಹೆಸರು ಹಿಡಿದು ಜೋರಾಗಿ ಕೂಗಲಾರಂಭಿಸತ್ತಾನೆ, ಪ್ರತ್ಯುತ್ತರ ಬರುವುದಿಲ್ಲ. ಬದಲಿಗೆ ಅವನ ಕೂಗು ಅವನಿಗೆ ಪ್ರತಿಧ್ವನಿಸುತ್ತದೆ. ಸರಿ ಎಂದು ತನ್ನ ಫೋನನ್ನು ತೆಗೆದು ಒಬ್ಬರಾದ ಮೇಲೆ ಒಬ್ಬರಿಗೆ ಕರೆ ಮಾಡುತ್ತಾನೆ. **'the number your trying to call is not reachable'** ಎಂದು ಒಬ್ಬ ಹೆಣ್ಣು ಹೇಳಿ ಪೂರೈಸಿ ಇವನಿಗೆ ಮಾತನಾಡಲೂ ಸಹ ಅವಕಾಶ ಕೊಡದೆ ಫೋನ್ ಕಟ್ ಮಾಡುತ್ತಾಳೆ. ಏನು ಮಾಡಬೇಕೆಂದು ದಿಕ್ಕು ತೋಚದ ವಿಶ್ವ ಸ್ವಲ್ಪ ಹೊತ್ತು ಎಲ್ಲರೂ ಏನಾದರೆಂದು ಯೋಚಿಸುತ್ತಲೇ ಮನೆಗೆ ಮರಳಲು ಗಾಡಿ ಶುರು ಮಾಡಿ ರಾತ್ರಿ ಬಂದ ದಾರಿಯಲ್ಲೇ ವಾಪಸ್ಸಾಗುತ್ತಾನೆ. ಹಾಗೆ ಚಲಿಸುವಾಗ ವಿಶ್ವನ ಮೆದುಳಲ್ಲಿ "ಅವರೆಲ್ಲಾ ಎಲ್ಲಿ ಹೋದರು, ಯಾವತ್ತೂ ಬಿಟ್ಟು ಹೋಗಿಲ್ಲವಲ್ಲ ಏನಾದ್ರು ಆಯ್ತಾ, ಈ ಕಡೆ ಹುಲಿಗಿಲಿ, ಆನೆಗೀನೆ ಇಲ್ಲಾ ಅಲ್ವಾ" ಎಂದು ಯೋಚಿಸುತ್ತಿರುವಾಗಲೇ, ಒಂದು ವಾರದ ಹಿಂದೆಯೇ ಅವರ ಊರಿನ ಹತ್ತಿರದಲ್ಲೇ ಇರುವ ವರ್ಲಕೊಂಡ ಬೆಟ್ಟದಲ್ಲಿ ಚಿರತೆಯೊಂದು ಕಾಣಿಸಿಕೊಂಡು ದನ ಕಾಯುವವರ ಮೇಲೆ 'ಗರಿ ಅವನ ಬೆನ್ನೆಲ್ಲಾ ಪರಚಿ ಗಾಯವಾಗಿ ನ್ಯೂಸ್‌ನಲ್ಲೆಲ್ಲ ಬಂದುದು ನೆನಪಾಗಿ ಭಯವಾದರೂ "ಹೇ ಚಿರ್ತೆ ಗಿರ್ತೆ ಬಂದಿದ್ರೆ ಅವ್ರೂ ಕಿರ್ಚುಕೊಂಡಾಗಾದ್ರು ನನ್ಗೆ ಎಚ್ರ ಆಗ್ತಿರ್ಲಿಲ್ವೆ" ಎಂದು ಸಮಾಧಾನ ಮಾಡಿಕೊಂಡು ಹಠಾತ್ತನೆ ಗಾಡಿ ಬ್ರೇಕ್ ಹಾಕಿ ಸುತ್ತಲೂ ನೋಡುತ್ತಾನೆ, ಅದೇ ಎಣ್ಣೆ ಮರ!, ಅದೇ ಜಾಗ!

ಮರಳಿ ಅವನು ಅಲ್ಲಿಗೆ ಬಂದಿರುತ್ತಾನೆ. ಅಯೋಮಯ ಎನಿಸಿದರೂ 'ಎಲ್ಲೊ ಯೋಚಿಸುತ್ತಾ ದಾರಿ ತಪ್ಪಿರಬಹುದು' ಎಂದು ಈ ಬಾರಿ ಯೋಚನೆಯನ್ನು ನಿಲ್ಲಿಸಿ ದಾರಿ ಕಡೆ ಗಮನ ಕೊಟ್ಟು ಎಚ್ಚರ ವಹಿಸಿ ಗಾಡಿ ಓಡಿಸುತ್ತಾನೆ, ಸುಮಾರು ಐದಾರು ಕಿ.ಮೀ. ಚಲಿಸಿದ ನಂತರ ನೋಡುತ್ತಾನೆ ಮತ್ತೆ ಅದೇ ಎಣ್ಣೆ ಮರದ ಬಳಿ ಬಂದು ನಿಲ್ಲಿಸಿ ನೋಡಿ ಆಶ್ಚರ್ಯ ಚಕಿತನಾಗುತ್ತಾನೆ. 'ಅರೆ ಇದೇನಿದು ತಾನು ಎಷ್ಟೋ ಬಾರಿ ಓಡಾಡಿದ ದಾರಿ, ಎಷ್ಟೋ ದಿನಗಳಿಂದ ನಾವು ಇಲ್ಲಿಗೆ ಬರ್ತಾಯಿದೀವಿ, ಆದ್ರೆ ಯಾವಾಗೂ ಹಿಂಗಾಗಿಲ್ಲ' ಎಂದು ಮನದಲ್ಲೇ ಅಂದುಕೊಂಡು, ಇನ್ನೊಂದು ಬಾರಿ ಎಲ್ಲರಿಗೂ ಕರೆ ಮಾಡಲು ಪ್ರಯತ್ನಿಸುತ್ತಾನೆ ಆದರೆ ಪ್ರಯೋಜನವಾಗಲಿಲ್ಲ. ಬೇರೆ ಯಾರಿಗಾದರು ಕರೆ ಮಾಡೋಣ ಎಂದು ಯೋಚನೆ ಮಾಡುವಷ್ಟರಲ್ಲಿ ಅವನ ಫೋನ್ ಸ್ವಿಚ್ ಆಫ್ ಆಗಿರುತ್ತದೆ. ಆ ದಾರಿ ಅಲ್ಲದಿದ್ದರೆ ಇನ್ನೊಂದು ದಾರಿಯಿಂದ ಹೋಗೋಣ ಎಂದು ಹಿಂದೆ ಹೋದ ದಾರಿಯಲ್ಲದೆ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಾನೆ ಆದರೆ ಪ್ರಯೋಜನವಾಗುವುದಿಲ್ಲ ಮತ್ತೆ ಅಲ್ಲಿಗೆ ತಲುಪುತ್ತಾನೆ. ವಿಶ್ವನಿಗೆ ತಾನು ಯಾವುದೋ ಒಂದು ವ್ಯೂಹದೊಳಗೆ ಸಿಕ್ಕಿ ಹಾಕಿಕೊಂಡ ಹಾಗೆ ಅನಿಸಿ ಭಯ ಶುರುವಾಗುತ್ತದೆ. ತಾವು ವದಂತಿ ಎಬ್ಬಿಸಿದ ದೆವ್ವ ಭೂತದ ಕೆಲಸವಿರಬಹುದಾ? ಎಂದು ಆಲೋಚನೆ ಬಂದ ತಕ್ಷಣ ಅವನ ಭಯ ದುಪ್ಪಟ್ಟಾಗುತ್ತದೆ. ಗಾಡಿಯಿಂದ ಕೆಳಗೆ ಇಳಿದು ಹೋಗಿ ಆಲದ ಮರದಡಿ ಕೂರುತ್ತಾನೆ. ಹಿಂದಿನ ದಿನ ಸಂಜೆ ತನಗೆ ತಂಪಾಗಿ ಕಂಡ ವಾತಾವರಣ ಈಗ ಯಾಕೊ ಇದ್ದಕ್ಕಿದ್ದಂತೆ ಭಯಂಕರವೆನಿಸಿತು. ಹಾಗೆ ಸ್ವಲ್ಪ ಹೊತ್ತು ಕೂತು ಯೋಚಿಸತೊಡಗುತ್ತಾನೆ, ಅಮ್ಮ, ಅಪ್ಪ, ತಂಗಿ, ಸಹ ಉದ್ಯೋಗಿಗಳು, ಆಫೀಸ್, ಎಲ್ಲರೂ ನೆನಪಾಗಿ ಅಳು ಬಂದಂತಾಗುತ್ತದೆ. ಬಿಕ್ಕಿ ಬಿಕ್ಕಿ ಅಳತೊಡಗುತ್ತಾನೆ.

ಒಮ್ಮೆಲೆ ತನ್ನ ಸ್ನೇಹಿತರು ನೆನಪಾಗಿ "ಅವರಿಂದಲೆ ನನಗೀ ಪರಿಸ್ಥಿತಿ" ಎಂದುಕೊಂಡು ಅವರನ್ನು ಮನಸ್ಸಿನಲ್ಲೇ ಶಪಿಸುತ್ತಾನೆ. ಎದ್ದು ಗಾಡಿ ತೆಗೆದು ಮತ್ತೇ ದಾರಿಯನ್ವೇಷಣಕ್ಕೆ ಹೊರಡುತ್ತಾನೆ, ಆದರೆ ಮತ್ತೆ ಅಲ್ಲಿಗೆ ಬಂದು ನಿಲ್ಲುತ್ತಾನೆ. ಗಾಡಿಯಿಳಿದು ಕೋಪದಿಂದ ಕೂಗಿಕೊಳ್ಳುತ್ತಾನೆ. ಹೋಗಿ ಜೋರಾಗಿ ಆಲದ